3. It has been reported in the Press-Deccan Herald of to-day that the Minister has given some assurance to the students and staff. May I know what is the assurance the Minister has given to the students?

SRI. M. MALLAPPA.—My assurance is only to make a genuine attempt to solve the problem-to resole the situation. The staff and students of the College met me yesterday and I heard them. I have asked for a report from the Special Deputy Commissioner, Belgaum, and I am expecting it shortly. I will carefully examine the report of the channabasappa Committee and also the report of the Special Deputy Commissioner, Belgaum, and action will be taken as per rules.

SRI. B. B. SAYANAK.—There are 250 lady students in the College. The Ladies Hostel is closed, and the ladies were man handled. I do not know why the Government is not serious about all these things!

SRI. M MALLAPPA—I am extremely sorry; yesterday the lady staff members had come along with the students; they never brought this point to my notice regarding the mandhandling of the lady students in the Homeopathy college.

SRI. V. M. GHADI.—Hon. member was absent.

## Matters under rule 312:

(i) *re. purificaton of drinking water in Bangalore City.*

ಶ್ರೀ ಪಿ. ರಾಂದೇವ್.—(ಮಲ್ಲೇಶ್ವರ) ಬೆಂಗಳೂರು ನಗರದ ಕುಡಿಯುವ ನೀರಿನಲ್ಲಿ ಉಂಟಾಗಿರತಕ್ಕ ಪೊಲ್ಯೂಷನ್ ಬಗ್ಗೆ ಸರ್ಕಾರದ ಗಮನವನ್ನು ನಾನು ಸೆಳೆಯುತ್ತೇನೆ. ಈಗಾಗಲೇ ಈ ವಿಚಾರ ಪತ್ರಿಕೆಗಳಲ್ಲೂ ಬಂದಿದೆ. ಮೂರು ದಿವಸದ ಹಿಂದೆ ಈ ಸಭೆಯಲ್ಲಿ ಕಾಲರಾ ವಿಚಾರವನ್ನು ಮಾತನಾಡುವಾಗ ಈ ವಿಷಯವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಲಕ್ಷಾಂತರ ಜನರ ಪ್ರಾಣವನ್ನು ಈವತ್ತು ಜಲಮಂಡಲಿ ತನ್ನ ಆಟದ ಸ್ವತ್ತನ್ನಾಗಿ ಮಾಡಿಕೊಂಡಿದೆ ಎಂದು ಹೇಳಿದರೆ ತಪ್ಪಾಗಲಾರದು. ೧೯೭೮ನೇ ಸೆಪ್ಟೆಂಬರ್‌ನಿಂದ ೧೯೭೯ನೇ ಫೆಬ್ರವರಿವರೆಗೆ ಸುಮಾರು ೬ ತಿಂಗಳುಗಳ ಕಾಲ ಸತತವಾಗಿ ಸಾರ್ವಜನಿಕ ಆರೋಗ್ಯ ಸಂಸ್ಥೆಯವರು ಬೆಂಗಳೂರು ಕುಡಿಯುವ ನೀರಿನ ಬಗ್ಗೆ ತನ್ನ ವರದಿಯನ್ನು ಕಳುಹಿಸುತ್ತಿದ್ದರು. ೬ ತಿಂಗಳುಗಳ ಕಾಲ ಸಾರ್ವಜನಿಕ ಆರೋಗ್ಯ ಸಂಸ್ಥೆಯವರು ಕುಡಿಯುವ ನೀರಿನಲ್ಲಿ ಬ್ಯಾಕ್ಟೀರಿಯಾಗಳಿವೆ, ಇನ್‌ಫೆಕ್ಷನರೀಸ್ ಇವೆ ಎಂದು ತನ್ನ ವರದಿಯಲ್ಲಿ ಪ್ರತಿ ತಿಂಗಳೂ ತಿಳಿಸುತ್ತಿದ್ದರೂ ಸಹ ಫೆಬ್ರವರಿ ಕೊನೇವರೆಗೂ ಜಲಮಂಡಲಿಯವರು ಯಾವುದೇ ಕ್ರಮವನ್ನೂ ತೆಗೆದುಕೊಂಡಿಲ್ಲ. ಮಾರ್ಚ್ ೩ನೇ ತಾರೀಖು ಕಾರ್ಪೊರೇಷನ್ನಿನ ಆರೋಗ್ಯಾಧಿಕಾರಿಗಳು ಬೆಂಗಳೂರಿನಲ್ಲಿ ಕಾಲರಾ ಹಬ್ಬಿದಾಗ ಬೆಂಗಳೂರು ಜಲಮಂಡಲಿಗೆ ಪತ್ರ ಬರೆದು ಬೆಂಗಳೂರು ನಾಗರೀಕರಿಗೆ ಸರಬರಾಜಾಗುತ್ತಿರುವ ನೀರಿನಲ್ಲಿ ಓಷ ಇದೆ ಅದನ್ನು ಸರಿಪಡಿಸಿ ಎಂದು ತಿಳಿಸಿದರೂ ಕೂಡ ಜಲಮಂಡಲಿಯವರು ಆ ಬಗ್ಗೆ ಗಮನ ಕೊಡಲಿಲ್ಲ. ೧೩ನೇ ತಾರೀಖು ನಡೆದು ಕನ್‌ಸಲ್‌ಟೇಟೀವ್ ಕಮಿಟಿ ಮೀಟಿಂಗ್‌ನಲ್ಲಿ ಹಿಂದಿನ ಜಲಮಂಡಲಿಯ ಅಧ್ಯಕ್ಷರಾಗಿದ್ದ ಮುಗ್ದುಂ ಅವರು ಈ ವಿಚಾರವನ್ನು ಸಂಬಂಧಪಟ್ಟ ಅಧಿಕಾರಿಗಳ ಗಮನಕ್ಕೆ ತಂದು, ಇಂದು ಬಹಳ ಗಂಭೀರವಾದ ವಿಷಯ, ನವದೆಹಲಿಯಲ್ಲಿ ಕೂಡ ಇದೇ ರೀತಿ ಕುಡಿಯುವ ನೀರು ಕೆಟ್ಟಾಗ ಸಿವರೇಜ್ ವಾಟರ್ ಕುಡಿಯುವ ನೀರಿನ ಜೊತೆ ಸೇರಿಕೊಂಡಾಗ ಅಲ್ಲಿನ ಜನಗಳು ಈ ನೀರನ್ನು ಕುಡಿದಿದ್ದರಿಂದ ಕೆಲವರು ಕಾಯಿಲೆ ಬಿದ್ದು ಇನ್ನು ಕೆಲವರು ಸತ್ತಿರುವ ಅಂಶವನ್ನು ಗಮನಕ್ಕೆ ತೆಗೆದುಕೊಂಡು ನಿನ್ನೆ ದಿವಸ ಜಲಮಂಡಲಿಯವರಿ

ಒಂದು ಹೇಳಿಕೆ ನೀಡಿ ಮಾರ್ಚ್ ತಿಂಗಳಲ್ಲಿ ಸರಬರಾಜು ಮಾಡಿರುವ ಕುಡಿಯುವ ನೀರು ಯೋಗ್ಯವಾಗಿದೆ ಎಂದು ತಿಳಿಸಿದ್ದಾರೆ. ಜಲಮಂಡಲಿಯವರು ಪ್ರತಿದಿನ ಹತ್ತಾರು ಕಡೆ ಸಬರಾಜಾಗುವ ನೀರಿನ ಸಾಂಪಲ್‌ಗಳನ್ನು ತೆಗೆದುಕೊಂಡು ಪರೀಕ್ಷೆ ಮಾಡಿಸತಕ್ಕ ಕ್ರಮವನ್ನು ಇಟ್ಟುಕೊಂಡಿಲ್ಲ. ಎರಡನೆಯದಾಗಿ ಏನಾಗಿದೆಯೆಂದರೇ ಈ ಪೊಲ್ಯೂಷನ್ ನೀರಿನಿಂದ ಜನರ ಆರೋಗ್ಯ ಕೆಟ್ಟಿರುವುದಲ್ಲದೆ ಕಾಲರಾ ಜೊತೆಯಲ್ಲಿ ಇನ್ನೂ ಇತರ ಖಾಯಿಲೆಗಳಾದ ಡೀಸೆಂಟ್ರಿ ಡಯೋರಿಯಾ. ಹೊಟ್ಟೆ ನೋವು: ಜಾಂಡೀಸ್ ಮುಂತಾದ ಕಾಯಿಲೆಗಳು ಜಾಸ್ತಿಯಾಗಿವೆ: ಆಸ್ಪತ್ರೆಗಳ ವರದಿಗಳಿಂದ ಈ ಅಂಶ ಸ್ಪಷ್ಟವಾಗಿ ಗೊತ್ತಾಗಿದೆ. ಇಷ್ಟೆಲ್ಲಾ ಆಗಬೇಕಾದರೆ ಜಲಮಂಡಲಿಯವರ ಉದಾಸೀನವೇ ಕಾರಣವಾಗಿದೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ ಅಥವಾ ಏನು ಕ್ರಮ ತೆಗೆದುಕೊಳ್ಳುತ್ತದೆ ಎಂಬುದನ್ನು ಮಾನ್ಯ ಮಂತ್ರಿಗಳು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ. ಸಾರ್ವಜನಿಕ ಆರೋಗ್ಯ ಸಂಸ್ಥೆಯವರು ಏನೇನು ವರದಿಗಳನ್ನು ಕಳುಹಿಸಿದ್ದಾರೋ ಅದನ್ನು ಮತ್ತು ಅದಕ್ಕೆ ಸಂಬಂಧಪಟ್ಟಂತ ಇತರ ಕಾಗದ ಪತ್ರಗಳನ್ನು ಈ ಸಭೆಯ ಮುಂದೆ ಇಡಬೇಕೆಂದು ಒತ್ತಾಯ ಪೂರ್ವಕವಾಗಿ ಕೇಳಿಕೊಳ್ಳುತ್ತೇನೆ. ಬೆಂಗಳೂರು ಜಲಮಂಡಲಿಯವರು ಲಕ್ಷಾಂತರ ಜನರ ಆರೋಗ್ಯವನು ಆಟದ ಸ್ವತ್ತನ್ನಾಗಿ ಮಾಡಿಕೊಂಡಿದ್ದಾರೆಂಬ ಅಂಶವನ್ನು ಸಭೆಯ ಗಮನಕ್ಕೆ ತರುತ್ತಾ ಮಾನ್ಯ ಮಂತ್ರಿಗಳು ಆದಷ್ಟು ಬೇಗ ಈ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಒಂದು ವೇಳೆ ಕ್ರಮ ತೆಗೆದುಕೊಂಡಿದ್ದರೆ ಏನು ಕ್ರಮ ತೆಗೆದುಕೊಂಡಿದೆಯೆಂಬುದನ್ನು ನಮಗೆ ತಿಳಿಸಬೇಕು ಎಂದು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

SRI H. C. SRIKANTIAN (Minister for Municipal Administration).— The Bangalore Water Supply and Sewerage Board gets the sample of the water supplied by it for drinking purposes tested in the Public Health Laboratory, The samples are drawn from the various points of supply, and in pursuance of the test results such samples, the Bangalore Water Supply and Sewerage Board taken prompt measures. The prescribed limit of toleratance of faecal coliform content in in the drinking water is 5%. During the month of March 1979, a number of samples were sent for testing to the Laboratory, and the results obtained, were found satisfactory in almost all the cases. Whenever the results are found to be bad, action is taken to see that the water supply lines are scoured and every possible precautionary measure is taken till results are found to be satisfactory.

2. A few days back, a news item had appeared in the local press about the excessive faecal coliform content in the water supplied in Bangalore Results referred to therein relate to the mouth of June 1978 This has nothink to do with the appearance of recent cholera in Bangalore. After the receipt of information about the incidence of cholera in the City, the Bangalore Water Supply and Sewerage Board has taken action to increase the dosage of chlorine from all the sources and also to re chlorinate in all the ground-level reservoirs inside the city. Even bleaching powder is being added at all possible places to see that the minimum residual chlorine is maintained in the distribution system. The latest results of the testing of the samples by the Public Health Laboratory for the past one month are found to be satisfactory. There is no reason to attribute the disease to the water supplied by the Bangalore Water Supply and Sewerage Board.

ಮಾನ್ಯ ಅಧ್ಯಕ್ಷರೇ ಮಾನ್ಯ ಸದಸ್ಯರಾದ ರಾಮದೇವ್ ಅವರು ಮಾತನಾಡಿ ಸಾರ್ವಜನಿಕ ಆರೋಗ್ಯ ಸಂಸ್ಥೆಯವರು ಬೆಂಗಳೂರಿನಲ್ಲಿ ಸರಬರಾಜು ಮಾಡುತ್ತಿರುವ ಕುಡಿಯುವ ನೀರನ್ನು ಪರೀಕ್ಷೆ ಮಾಡಿ ಅದು ಕುಡಿಯುವುದಕ್ಕೆ ಯೋಗ್ಯವಾಗಿಲ್ಲವೆಂದು ಜಲಮಂಡಲಿಗೆ ತಿಳಿಸಿದರೂ ಜಲಮಂಡಲಿಯವರು ಏನೂ ಕ್ರಮ ತೆಗೆದುಕೊಂಡಿಲ್ಲ ಎಂಬ ಅಂಶವನ್ನು ತಿಳಿಸಿದ್ದಾರೆ. ಸಾರ್ವಜನಿಕ ಆರೋಗ್ಯ ಸಂಸ್ಥೆಯವರು ಪ್ರತಿ ತಿಂಗಳೂ ನೀರನ್ನು ಪರೀಕ್ಷೆ ಮಾಡಿ ವರದಿ ಕಳುಹಿಸಿರುವುದು ನಿಜ. ಕೆಲವು ಸಂದರ್ಭಗಳಲ್ಲಿ ನೀರು ದೋಷಪೂರಿತವಾಗಿದೆಯೆಂದು ಕಂಡು ಬಂದಾಗ ಜಲಮಂಡಲಿಯವರು ಅದನ್ನು ಸರಿಪಡಿಸಲು ಎಲ್ಲ ರೀತಿಯ ಕ್ರಮಗಳನ್ನೂ ತೆಗೆದುಕೊಂಡಿದ್ದಾರೆ. ಮಾನ್ಯ ಸದಸ್ಯರು ಮಾತನಾಡುತ್ತಾ ಬೆಂಗಳೂರಿನಲ್ಲಿ ಕಾಲರಾ ರೋಗ ಹರಡಿರುವುದಕ್ಕೆ ಮುಖ್ಯ ಕಾರಣ ಈ ನೀರು ಎಂಬುದಾಗಿ ಹೇಳಿದ್ದಾರೆ. ಆದರೆ ಅದು ಸತ್ಯಕ್ಕೆ ದೂರವಾದ ಮಾತು. ಕಾಲರಾ ರೋಗ ಬಂದಿರುವುದಕ್ಕೆ ಕಾರಣ ಈ ಕುಡಿಯುವ ನೀರಲ್ಲ. ಅದಕ್ಕೂ ಇದಕ್ಕೂ ಏನು ಸಂಬಂಧವಿಲ್ಲ ಬೆಂಗಳೂರು ನಗರದ ಕಾರ್ಪೊರೇಷನ್ ಅಧಿಕಾರಿಗಳು ಮಾರ್ಚಿ ೧೩ನೇ ತಾರೀಖು ಒಂದು ಪತ್ರ ಬರೆದು ಜಲಮಂಡಲಿಗೆ ತಿಳಿಸಿರುವುದು ನಿಜ. ಅದಕ್ಕಿಂತ ಮುಂದೆ ತಿಳಿಸಿಲ್ಲ. ವಿಷಯ ತಿಳಿದ ಮೇಲೆ ನೀರನ್ನು ಶುದ್ಧೀಕರಿಸತಕ್ಕ ಕಾರ್ಯದಲ್ಲೂ ಹೆಚ್ಚು ಗಮನಹರಿಸಿ ಅದಕ್ಕೆ ಹಾಕುತ್ತಿದ್ದ ರಾಸಾಯನಿಕ ವಸ್ತುಗಳ ಡೋಸೇಜ್‌ಗಳನ್ನು ಜಾಸ್ತಿ ಮಾಡಿದ್ದಾರೆ, ಪೈಪ್ ಕಿತ್ತುಹೋಗಿರುವ ಕಡೆಗಳಲ್ಲಿ ಅದನ್ನು ಸರಿಯಾಗಿ ಜೋಡಣೆ ಮಾಡುವ ಕೆಲಸ ಮಾಡಿದ್ದಾರೆ. ಇದೆಲ್ಲಾ ಮಾಡಿ ಈಗ ಸರಬರಾಜಾಗುತ್ತಿರುವ ನೀರಿನಲ್ಲಿ ಯಾವುದೇ ತರಹದ ದೋಷವೂ ಇಲ್ಲ ಎಂಬ ಅಂಶವನ್ನು ಜಲಮಂಡಲಿಯವರು ತಿಳಿಸಿದ್ದಾರೆ. ನೀರು ದೋಷ ಪೂರಿತವಾಗಿದೆ ಎಂಬ ಅಂಶ ವೃತ್ತಪತ್ರಿಕೆಗಳಲ್ಲಿ ಬಂದಿದೆ. ಆದರೆ ಅದು ಯಾವ ಕಾರಣದಿಂದ ಬಂತು, ಹೇಗೆ ಬಂತು ಎಂಬುದು ನನಗಂತೂ ಗೊತ್ತಿಲ್ಲ. ಅವರಿಗೆ ಯಾರು ನೀರನ್ನು ಪರೀಕ್ಷೆ ಮಾಡಿ ತಿಳಿಸಿದ್ದಾರೋ ಅದೂ ಗೊತ್ತಿಲ್ಲ. ಆಥವಾ ವೃತ್ತಪತ್ರಿಕೆಯವರೇ ನೀರನ್ನು ಪರೀಕ್ಷೆ ಮಾಡಿದ್ದಾರೋ ಏನೋ ಗೊತ್ತಿಲ್ಲ. ವೃತ್ತಪತ್ರಿಕೆಯಲ್ಲಿ ಈ ವಿಷಯ ಬಂದಾಗ ನಾನೂ ಸಹ ನೋಡಿದ್ದೇನೆ. ತಕ್ಷಣ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ವಿಚಾರಣೆ ಮಾಡಿದೆ. ಅವರೂ ಕೂಡ ವಿಷಯ ಗೊತ್ತಾದಮೇಲೆ ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ, ಕುಡಿಯುವ ನೀರಿನಲ್ಲಿ ಹೆಚ್ಚು ಬ್ಯಾಕ್ಟೀರಿಯಾಗಳಿದ್ದವು ಎಂಬ ಅಂಶವನ್ನು ಮಾನ್ಯ ಸದಸ್ಯರಾದ ರಾಂದೇವ್ ಅವರು ಹೇಳಿದ್ದಾರೆ. ಆದರೆ ಅತಿಯಾಗಿ ಬ್ಯಾಕ್ಟೀರಿಯಾಗಳಿದ್ದವು ಎಂಬ ಅಂಶ ವರದಿಯಲ್ಲಿ ಕಾಣಲಿಲ್ಲ. ಒಂದು ವೇಳೆ ಹೆಚ್ಚು ಬ್ಯಾಕ್ಟೀರಿಯಾಗಳಿದ್ದರೆ ತಕ್ಷಣ ಮಂಜಾಗ್ರತೆ ಕ್ರಮಗಳನ್ನು ತೆಗೆದುಕೊಂಡು ಕುಡಿಯುವುದಕ್ಕೆ ಯೋಗ್ಯವಾಗಿರತಕ್ಕ ನೀರನ್ನು ಜಲ ಮಂಡಲಿಯವರು ಒದಗಿಸಿದ್ದಾರೆ,

ಶ್ರೀ ಪಿ. ರಾಂದೇವ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ಉತ್ತರ ಕೊಡುತ್ತಾ ಮಾರ್ಚಿ ೧೩ನೇ ತಾರೀಖಿನ ದಿವಸ ಕಾರ್ಪೊರೇಷನ್ ಆರೋಗ್ಯಾಧಿಕಾರಿಗಳು ಕಾಗದ ಬರೆದಮೇಲೆ ಉತ್ತಮವಾದ ನೀರು ಸರಬರಾಜು ಮಾಡಲಾಗಿದೆ ಎಂದು ಹೇಳಿದ್ದಾರೆ. ನನ್ನ ಪ್ರಶ್ನೆ ಏನೆಂದರೆ ಸೆಪ್ಟೆಂಬರ್ ೧೯೭೮ರಿಂದ ಫೆಬ್ರವರಿ ೧೯೭೯ರ ವರೆಗೆ ಅಂದರೆ ಕಾರ್ಪೊರೇಷನ್ ಆರೋಗ್ಯಾಧಿಕಾರಿಗಳು ಜಲಮಂಡಲಿಗೆ ಕಾಗದ ಬರೆಯುವವರೆಗೆ ಸಾರ್ವಜನಿಕ ಆರೋಗ್ಯ ಸಂಸ್ಥೆಯಿಂದ ಜಲಮಂಡಲಿಗೆ ಕುಡಿಯುವ ನೀರಿನ ವಿಷಯವಾಗಿ ಏನು ವರದಿ ಬಂದಿದೆಯೋ ಅದನ್ನು ಈ ಸಭೆಯ ಮುಂದೆ ಇಡುತ್ತೀರಾ ? ಈ ನೀರು ಕುಡಿದಿದ್ದರಿಂದ ಅನೇಕ ಕಾಯಿಲೆಗಳು ಬಂದಿರುವುದರ ಬಗ್ಗೆ ಆಸ್ಪತ್ರೆ ವರದಿಗಳಿವೆ. ಸಾರ್ವಜನಿಕ ಆರೋಗ್ಯ ಸಂಸ್ಥೆಯವರು ಸೆಪ್ಟೆಂಬರ್ ೧೯೭೮ರಿಂದ ಫೆಬ್ರವರಿ ೧೯೭೯ರ ವರೆಗೆ ಪ್ರತಿ ತಿಂಗಳ ವರದಿಯಲ್ಲಿ ನೀರಿನಲ್ಲಿ ಬ್ಯಾಕ್ಟೀರಿಯಾಗಳಿವೆ ಎಂದು ಹೇಳಿದರೂ ಜಲಮಂಡಲಿಯವರು ಏಕೆ ರಿಕೆ ವಹಿಸಿ ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಏನು ಹೇಳುತ್ತಾರೆ.

೧೦-೩೦ ಎ. ಎಂ.

ಶ್ರೀ ಎಚ್. ಸಿ. ಶ್ರೀಕಂಠಯ್ಯ :—ಸಾರ್ವಜನಿಕ ಆರೋಗ್ಯ ಸಂಸ್ಥೆಯವರು ಕೊಟ್ಟಿರುವ ವರದಿ ಏನು ಇದೆ. ಅದನ್ನು ನಾಳೆಯ ಸಭೆಯ ಮುಂದೆ ಇಡುವುದಕ್ಕೆ ತಯಾರಾಗಿದ್ದೇನೆ. ಸಾರ್ವಜನಿಕರ ಆರೋಗ್ಯ ಸಂಸ್ಥೆಯವರು ಕಳುಹಿಸಿರತಕ್ಕಂಥ ವರದಿಯಲ್ಲಿ ದೋಷ ಇದೆ ಎಂಬುದಾಗಿ ಕಳುಹಿಸಿದ್ದಾರೆಂದು ನಾನೇ ಹೇಳಿದ್ದೇನೆ. ಇಲ್ಲವೆಂದು ಹೇಳುವುದಿಲ್ಲ. ಯಾವ ಯಾವ ಸಂದರ್ಭದಲ್ಲಿ ಎಲ್ಲಿ ದೋಷ ಇದೆ ಎಂಬುದಾಗಿ ಅವರು ಹೇಳಿದ್ದಾರೋ ಅದನ್ನು ನಿವಾರಣೆ ಮಾಡಿದ್ದೇವೆಂದು ಹೇಳಿದ್ದೇನೆ. ಮುಂಜಾಗ್ರತೆ ಕ್ರಮ

ವನ್ನೂ ತೆಗೆದುಕೊಂಡಿದ್ದೇವೆಂದು ಹೇಳಿದ್ದೇನೆ. ದೋಷ ಇಲ್ಲ. ಆದು ಸುಳ್ಳು ಎಂದು ನಾನು ಹೇಳಲಿಲ್ಲ. ಅವರು ಕಳುಹಿಸಿರತಕ್ಕಂಥ ಮಾಹಿಕ ವರದಿಯ ಸ್ಟೇಟ್‌ಮೆಂಟ್ ನನ್ನಲ್ಲಿ ಇದೆ. ಯಾವ ಯಾವುದರಲ್ಲಿ ದೋಷ ಇದೆ ನೀರಿನಲ್ಲಿ ಬ್ಯಾಕ್ಟೀರಿಯಾ ಕಂಟೆಂಟ್ಸ್ ಜಾಸ್ತಿ ಇದೆ ಎಂಬುದಾಗಿ ತಿಳಿಸಿದ್ದಾರೆ. ಅವುಗಳನ್ನು ನಿವಾರಣೆ ಮಾಡುವುದಕ್ಕೆ ಎಲ್ಲ ಕ್ರಮಗಳನ್ನು ನಮ್ಮ ಬೆಂಗಳೂರು ನಗರದ ನೀರು ಸರಬರಾಜು ಮಂಡಲಿಯವರು ತೆಗೆದುಕೊಂಡಿದ್ದಾರೆ. ಅವರು ಕೊಟ್ಟಿರತಕ್ಕಂಥ ವರದಿಯಲ್ಲಿ ದೋಷ ಇಲ್ಲವೆಂದು ಹೇಳಿಲ್ಲ. ಇರತಕ್ಕಂಥ ದೋಷವನ್ನು ಸರಿಪಡಿಸಿದ್ದಾರೆ.

SRI. A. LAKSHMI SAGAR :-Concequent upon the report that appeared in Deccan Herald yesterday, the Superintending Engineer, Bangalore Water and Sewerage Board has clarified certain points and given some explanation. Part of the explanation reads thus :

> ".....the statement argued that in large distribution system like the city of Bangalore samples in some places would be vague".

May I ask the clarification from the Hon. Minister ? We are dealing with drinking water. Utmost care is necessary on the part of the establishment which ie responsible for the distribuiion of water to Bangalore city. I would like to know weather or not the Hon. Minister had read this report ; if so what is his reaction ? When sample is taken, the sample should indicate the result of it. What does he say about it ?

ಶ್ರೀ ಎಚ್.ಸಿ. ಶ್ರೀಕಂಠಯ್ಯ :—ಕೊಟ್ಟಿರತಕ್ಕಂಥ ವರದಿಯಲ್ಲಿ ದೋಷ ಇಲ್ಲವೆಂದು ನಾನು ಹೇಳಲಿಲ್ಲ. ಕೊಟ್ಟಿರತಕ್ಕಂಥ ನೀರಿನ ಸ್ಯಾಂಪಲ್‌ನಲ್ಲಿ ದೋಷ ಇದೆ ಎಂಬುದಾಗಿ ಅವರು ತಿಳಿಸಿದ್ದಾರೆ. ಅದನ್ನು ಸರಿಪಡಿಸುವುದಕ್ಕೆ ಬೇಕಾದಂತಹ ಎಲ್ಲ ಕ್ರಮಗಳನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೇನೆ. ಸೂಪರಿಂಟೆಂಡೆಂಟ್ ಇಂಜಿನೀಯರವರು ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದಾರೋ ನನಗೆ ಗೊತ್ತಿಲ್ಲ. ಅದನ್ನು ನಾನು ಇನ್ನು ಓದಿಲ್ಲ. ಕೆಲವು ಸಂದರ್ಭಗಳಲ್ಲಿ ಪತ್ರಿಕೆಗಳಲ್ಲಿ ಬರತಕ್ಕಂಥ ವರದಿಯನ್ನು ನಂಬುವುದೂ ಕಷ್ಟ. ಇದರ ಬಗ್ಗೆ ಅನೇಕ ಸಂದರ್ಭಗಳಲ್ಲಿ ನಮಗೆ ಅರಿವಾಗಿದೆ. ಆ ಅಧಿಕಾರಿಯನ್ನು ನಾನು ಏನು ಸ್ಟೇಟ್‌ಮೆಂಟ್ ಕೊಟ್ಟಿದ್ದೀಯಾ ಎಂಬುದಾಗಿ ಕೇಳುತ್ತೇನೆ. ಆ ಅಧಿಕಾರಿಯನ್ನು ಕೇಳಿದ ಹೊರತು ನಾನು ಹೇಗೆ ಹೇಳಲಿ ? ಪ್ರತಿಯೊಬ್ಬ ಸದಸ್ಯರ ಅಭಿಪ್ರಾಯವೇನೆಂದರೆ ಬೆಂಗಳೂರು ನಗರದ ನಾಗರೀಕರಿಗೆ ಒಳ್ಳೆಯ ನೀರನ್ನು ಕೊಡುವುದಕ್ಕೆ ಪ್ರಯತ್ನ ಮಾಡಿ ಎಂಬುದಾಗಿ ಹೇಳುತ್ತಾರೆ. ಆದೇ ರೀತಿ ಹಿಂದೆ ಇದ್ದಂತಹ ಮುಖ್ಯ ಇಂಜಿನೀಯರ್ ಸರಿಯಾಗಿ ಕೆಲಸ ಮಾಡುತ್ತಿರಲಿಲ್ಲವೆಂದು ಬದಲಾವಣೆ ಮಾಡಿದ್ದೇವೆ. ಈಗ ಇರತಕ್ಕಂಥ ಮುಖ್ಯ ಇಂಜಿನೀಯರ್ ಬಹಳ ಚಟುವಟಿಕೆಯಿಂದ ಚುರುಕಾಗಿ ಕೆಲಸ ಮಾಡುವುದಕ್ಕೆ ಬೇಕಾದಂತಹ ಸಿದ್ಧತೆಗಳನ್ನು ಮಾಡಿಕೊಂಡಿದ್ದಾರೆ.

*(ii) re : Strike by the auto-rickshaw drivers in Bangalore city*

†ಶ್ರೀ ಟಿ.ಆರ್. ಶಾಮಣ್ಣ (ಬಸವನಗುಡಿ) :—ಮಾನ್ಯ ಅಧ್ಯಕ್ಷರೇ, ಕಳೆದ ಮೂರು ದಿವಸಗಳಿಂದಲೂ ಬೆಂಗಳೂರು ನಗರದ ನಾಗರೀಕರಿಗೆ ಅತಿ ಹೆಚ್ಚಿನ ತೊಂದರೆಯಾಗಿದೆ. ಅದಕ್ಕೆ ಕಾರಣ ಆಟೋರಿಕ್ಷಾದವರ ಮುಷ್ಕರ. ಇವತ್ತು ಆ ಆಟೋರಿಕ್ಷಾದವರು ತಮ್ಮ ಮುಷ್ಕರವನ್ನು ನಿಲ್ಲಿಸಿದ್ದಾರೆ. ಇವತ್ತು ಆಟೋರಿಕ್ಷಗಳು ಓಡಾಡುತ್ತಿವೆ ; ಸಂತೋಷ. ಈ ವಿಚಾರದ ಬಗ್ಗೆ ತಮ್ಮ ಮುಖಾಂತರ ಸರ್ಕಾರಕ್ಕೆ ಒಂದು ವಿಷಯವನ್ನು ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಆಟೋರಿಕ್ಷಾದ ಡ್ರೈವರ್‌ಗೆ ಯಾರೋ ಒಬ್ಬ ಪೋಲೀಸಿನವರು ಹೊಡೆದರು ಎಂದರೆ ಅದಕ್ಕೊ ಆಟೋ ಸ್ಟೈಕ್ ಮಾಡುತ್ತಾರೆ. ಇನ್ನು ನಾನಾ ರೀತಿಯವಾಗಿ ಯಾವುದೋ ಒಂದು ಸಣ್ಣ ವಿಚಾರಕ್ಕೆ ಆಟೋರಿಕ್ಷಾಗಳನ್ನು ನಿಲ್ಲಿಸಿಬಿಡುತ್ತಾರೆ. ಈ ರೀತಿಯಾಗಿ ಪದೇ ಪದೇ ಆಟೋರಿಕ್ಷಾದವರು ಮುಷ್ಕರ ಹೂಡುವುದನ್ನು ತಪ್ಪಿಸಬೇಕಾದುದು ಅತಿ ಅಗತ್ಯವಾಗಿದೆ. ಇದರ ಬಗ್ಗೆ ಯಾವುದಾದರೂ ಒಂದು ಸರಿಯಾದ ಕ್ರಮವನ್ನು ತೆಗೆದುಕೊಳ್ಳಬೇಕಾಗಿದೆ. ನನ್ನ ಮಾಹಿತಿ